ಎಂಬರ್ಥದಲ್ಲಿ. ಹಾಗಾಗಿ ಬೇಂದ್ರೆಯವರಲ್ಲಿ ರತಿ ಮತ್ತು ಕಾಮ ಎಂಬುದು ಬೇರೆ ಬೇರೆ ಪ್ರತಿಮೆಗಳ ರೂಪ ಪಡೆಯುತ್ತದೆ. ಮನಸ್ಸು ಮತ್ತು ದೇಹವನ್ನು ಸಮಪ್ರಮಾಣದಲ್ಲಿ ಸ್ವೀಕರಿಸುವ 'ಸಮರಸವೇ ಜೀವನ' ಎಂಬ ಸೂತ್ರ ಅವರ ರಚನೆಗಳಲ್ಲಿ ಕಾಣುತ್ತದೆ. ಸಂತೆ ಬಗ್ಗೆ ಹೇಳುವಾಗ ಸ್ವತಃ ಬೇಂದ್ರೆಯವರು ಅದರೊಳಗೆ ಹೊಕ್ಕ ಹುಡುಗನ ಬೆರಗು ಪಡೆಯುತ್ತಾರೆ. ಅಲ್ಲಿಯೇ ಅವರು ಲೋಕ ದರ್ಶನದ ಸ್ವಆನಂದ ಪಡೆಯುತ್ತಾರೆ. ಚುರುಕು ಬುದ್ಧಿಯ ಮತ್ತು ಚುರುಕು ಮನಸಿನವರಾಗಿದ್ದ ಅವರು ಧಾರವಾಡ ಸೀಮೆಯ ಜನಪದೀಯ ಹಾಡು ಪ್ರಕಾರಗಳಾದ ಗೀಗೀ ಪದ, ತ್ರಿಪದಿ, ಚೌಪದಿ, ಲಾವಣಿಗಳಿಗೆ ಮಾರು ಹೊಗಿದ್ದಲ್ಲದೆ, ಅವುಗಳನ್ನು ತಮ್ಮ ಕಾವ್ಯದಲ್ಲಿ ಪ್ರಯೋಗಿಸುತ್ತಾರೆ. ಇದು ಕೂಡ ಒಂದು ರೀತಿಯ ಪ್ರಯತ್ನಪೂರ್ವಕ ಆಯ್ಕೆ ಆಗಿರುವುದರಿಂದ ಅವರನ್ನು ಜನಪದ ಕವಿ ಎಂದು ಕರೆಯುವುದು ಅಷ್ಟು ಸಮಂಜಸವಲ್ಲ. ಈ ವ್ಯತ್ಯಾಸವನ್ನು ಆನಂದಕಂದರ ಮತ್ತು ಮಧುರಚೆನ್ನರ ಕವಿತೆಗಳಿಗೆ ಅವರ ಪದ್ಯಗಳನ್ನು ಹೋಲಿಸಿದಾಗ ತಿಳಿಯುತ್ತದೆ. ಇಲ್ಲ ಕೃಷಿ ಪ್ರಧಾನ ಮತ್ತು ಕರಕುಶಲ ಸಮುದಾಯಗಳು ತಮ್ಮ ಬದುಕಿನ ಭಾಗವಾಗಿ ಹೆಣೆಯುವ ಹಾಡುಗಳೊಂದಿಗೆ ಇಟ್ಟು ನೋಡಿದರೂ ಭಿನ್ನತೆ ಅರಿವಾಗುತ್ತದೆ.

'ರಾಗರತಿ', 'ನೀರಿಗೆ ನಡೆದಾಗ', 'ಪಾತರಗಿತ್ತಿ ಪಕ್ಕ', 'ಕುಣಿಯೋಣು ಬಾರ', 'ಜೋಗಿ', 'ಚೆಲುವು', 'ಹುಬ್ಬಳ್ಳಿಯಾಂವಾ', 'ಅಕ್ಕರತಿ', 'ಚಿಗರಿ ಕಂಗಳ ಚೆಲುವಿ', 'ಕುರುಡು ಕಾಂಚಣ' ಹೀಗೆ ಅನೇಕ ಕವಿತೆಗಳಲ್ಲಿ ಬರುವ –ಏರಿತ್ತ, ನೋಡಿದೇನ, ಬರಲಿಲ್ಲ, ಚಿಂತ್ಯಾಕ, ಕುಣಿತಾವ, ಮೂಡ್ಯಾವ, ಜಾರಿದ್ಹಂಗ, ಏರಿದ್ಹಾಂಗ ಎಂಬ ಧಾತುಗಳು ವಿಶೇಷ ಅರ್ಥ ಪಡೆದು ಓದುಗ–ಕೇಳುಗನಲ್ಲಿ ರಸಸಿದ್ಧಿ ಉಂಟು ಮಾಡುತ್ತವೆ. ನಿತ್ಯ ಬಳಕೆಯ ಸಾಮಾನ್ಯ ಕ್ರಿಯಾಪದದೊಳಗಣ ಲಯದ ಗುಣ ಥಟ್ಟನೆ ಅವಕ್ಕೆ ಒಂದು ಕ್ರಿಯಾಶೀಲ ಪ್ರತಿಮೆಯ ರೂಪ ದಯಪಾಲಿಸುತ್ತದೆ. ಉದಾಹರಣೆಗೆ 'ಗರಿ' ಸಂಕಲನದ ಕೆಳಗಿನ ಕವಿತೆಯನ್ನು ಓದಿ:

ಹಳ್ಳದ ದಂಡ್ಯಾಗ ಮೊದಲಿಗೆ ಕಂಡಾಗ
ಏನೊಂದು ನಗಿ ಇತ್ತ
ಏನೊಂದ ನಗಿ ಇತ್ತ ಏನೊಂದ ನಗಿ ಇತ್ತ
ಏರಿಕೆ ನಗಿ ಇತ್ತ
ನಕ್ಕೊಮ್ಮೆ ಹೇಳ ಚೆನ್ನಿ ಆ ನಗಿ ಇತ್ತಿತ್ತ
ಹೋಗೇತಿ ಎತ್ತೆತ್ತ

ಹೀಗೆ ಹಲವು ಕಾವ್ಯ ಮಾದರಿಗಳನ್ನು ರಚಿಸಿ ತೋರಿರುವ ಬೇಂದ್ರೆಯವರು, ತಮ್ಮ ಪೂರ್ವ ಕವಿಗಳಿಂದ ಅದೆಷ್ಟೋ ಪಡೆದಿದ್ದಾರೆ. ವಚನಕಾರರ ರಚನೆಗಳಿಂದ, ಕೀರ್ತನಕಾರರ ಕೀರ್ತನೆಗಳಿಂದ, ಸರ್ವಜ್ಞನ ತ್ರಿಪದಿಗಳಿಂದ, ಶಿಶುನಾಳ ಷರೀಪರ ತತ್ತ್ವಪದಗಳಿಂದ ಅದೆಷ್ಟೋ ಪದಗಳನ್ನು ಪಡೆದಿದ್ದಾರೆ. ಹಾಗಾಗಿ ಲಕ್ಷ್ಮೀಶ ತೋಳ್ಪಾಡಿಯವರು ಗ್ರಹಿಸಿದಂತೆ ನಮ್ಮ ಪೂರ್ವ ಕವಿಗಳನ್ನು ಬಿಟ್ಟರೆ 20ನೇ ಶತಮಾನದ ಕನ್ನಡ ಕಾವ್ಯ ಸೃಷ್ಟಿಯಲ್ಲಿ ಶಬ್ದಾರ್ಥ ವ್ಯಾಮೋಹಿ ಯಾರಾದರು ಇದ್ದರೆ ಅದು ಬೇಂದ್ರೆ ಅಂತ ಹೇಳಬಹುದು. ಶಿಶುನಾಳರ 'ಕೋಡಗಾನ ಕೋಳಿ ನುಂಗಿತ್ತ' ರಚನೆಯನ್ನು ನೆನಪಿಸುವ 'ಬಾ ಹತ್ತರ' ಸಂಕಲನದ 'ಸೂಸಲ ನಗೆಯ ಸೂಕ್ತಿಗಳು' ಪದ್ಯದ ಈ ಕೆಳಗಿನ ಸಾಲು ಗಮನಿಸಬೇಕಾಗಿದೆ.

ಕಾಫಿ ಇಡ್ಡಲಿ ತಿಂತ್ಯು ಕಪ್ಪು ಬಸಿಯನು ತಿಂತ್ಯು
ಉಪ್ಪಿಟ್ಟು ತಿಂತ್ಯು ಉಡುಪೀಯ| ಕೃಷ್ಣನ್ನ